ಓ.ಎಸ್.ನಂ.178/2019

ಡಿ .ಡಬ್ಲ್ಯೂ- **1**

ದಿನಾಂಕ: **13-11-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು:** ವಾದಿ ಪರ ಶ್ರೀ ಎಸ್ ವಿ ಎ **ವಕೀಲರಿಂದ**

ವಾದಿಯರು ನನಗೆ ಗೊತ್ತಿರುತ್ತಾರೆ. ಪ್ರತಿವಾದಿಯರೆಲ್ಲರೂ ಅಣ್ಣತಮ್ಮಂದಿರು ಎಂದರೆ ಸರಿ. ವಾದಿಯರಿಗೆ ಹಾದಿಕೆರೆ ಗ್ರಾಮದ ಸರ್ವೆ ನಂ.171/2 ರಲ್ಲಿ 2 ಎಕರೆ 14 ಗುಂಟೆ ಜಮೀನು ಇರುತ್ತದೆ ಎಂದರೆ ಸರಿ. ಸದರಿ ಜಮೀನು ಈಗ ವಾದಿಯರ ಹೆಸರಿನಲ್ಲಿ ಜಂಟಿ ಖಾತೆ ಇದೆ ಎಂದರೆ ಸರಿ. 2 ಎಕರೆ 14 ಗುಂಟೆಯಲ್ಲಿ ದಾವ ಸ್ವತ್ತಿನಲ್ಲಿ ಮಾವಿನ ಗಿಡ ಇದೆ ಎಂದರೆ ಸರಿ. 2 ಎಕರೆ 14 ಗುಂಟೆ ವಾದಿಯರಿಗೆ ಪಿತ್ರಾರ್ಜಿತವಾಗಿ ಬಂದಿರುವಂತಹ ಆಸ್ತಿ ಆಗಿರುತ್ತದೆ ಎಂದರೆ ಸರಿ. ದಾವ ಸ್ವತ್ತಿನ ಪಶ್ಚಿಮ ದಿಕ್ಕಿಗೆ ನಮ್ಮ ಸರ್ವೆ ನಂ.172/1 ರಲ್ಲಿ 7 ಗುಂಟೆ ಇದೆ ಎಂದರೆ ಸರಿ. ವಾದಿಯರು ದಾವ ಸ್ವತ್ತಿನ ಜಮೀನಿನಲ್ಲಿ ಅವರ ಹಿರಿಯರಿಂದ ಸ್ವಾಧೀನದಲ್ಲಿರುತ್ತಾರೆಂದರೆ ಸರಿ. ದಿನಾಂಕ: 21-05-2019 ರಂದು ವಾದಿಯರ ಸ್ವಾಧೀನಕ್ಕೆ ನೀವು ತಂಟೆ ತಕರಾರು ಮಾಡಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ.

ವಾದಿಯರ ಮೇಲೆ ನಾನು ಪೊಲೀಸ್ ಠಾಣೆಯಲ್ಲಿ ದೂರು ನೀಡಿರುತ್ತೇನೆಂದರೆ ಸರಿ. ವಾದಿಯರು ಸದರಿ ದಾವೆಯನ್ನು ನಿಮ್ಮ ಮೇಲೆ ಹೂಡಿರುತ್ತಾರೆಂದರೆ ಸರಿ. ನೀವು ವಾದಿಯರ ಮೇಲೆ ಒ ಎಸ್ 60/2020 ರಲ್ಲಿ ದಾವೆ ಹೂಡಿರುತ್ತೀರಾ ಎಂದರೆ ಸರಿ. ಸಾಕ್ಷಿ ಮುಂದುವರಿದು ನನ್ನ ಜಮೀನು ವಾದಿಯರು ಒತ್ತುವರಿ ಮಾಡಿರುವ ಕಾರಣ ದಾವೆ ಹೂಡಿರುತ್ತೇನೆಂದು ನುಡಿದಿರುತ್ತಾರೆ. ಸರ್ವೆ ನಂ.172 ರಲ್ಲಿ ನನ್ನ ತಾಯಿಯದು ಮತ್ತು ನನ್ನ ಜಮೀನು ಸೇರಿ ಒಟ್ಟು 9 ಎಕರೆ 21 ಗುಂಟೆ ಇರುತ್ತದೆ. ನೀವು ಸಂಪೂರ್ಣ 9 ಎಕರೆ 21 ಗುಂಟೆಗೆ ಅಳತೆ ಮಾಡಲು ಅರ್ಜಿ ಸಲ್ಲಿಸಿದ್ದೀರಾ ಎಂದರೆ ಸಾಕ್ಷಿ ನಾನು ಕೇವಲ ನನ್ನ ಹೆಸರಿನಲ್ಲಿರುವ 7 ಗುಂಟೆ ಜಮೀನಿಗೆ ಹದ್ದುಬಸ್ತು ಮಾಡಿಸಲು ಅರ್ಜಿ ಸಲ್ಲಿಸಿರುತ್ತೇನೆಂದು ನುಡಿದಿರುತ್ತಾರೆ. ಹಾದಿಕೆರೆ ಗ್ರಾಮದಿಂದ ರಾಗಿಬಸಪ್ಪನಹಳ್ಳಿ ಗ್ರಾಮಕ್ಕೆ ಸರ್ವೆ ನಂ.172 ರಲ್ಲಿ ನಿಮ್ಮ ಜಮೀನಿನ ಪಶ್ಚಿಮ ದಿಕ್ಕಿಗೆ ದಾರಿ ಹಾದು ಹೋಗಿದೆ ಎಂದರೆ ಸಾಕ್ಷಿ ಹೌದು ಎಂದು ನುಡಿದಿರುತ್ತಾರೆ.

ಸದರಿ ದಾರಿ ನಿಮ್ಮ ಸರ್ವೆ ನಂಬರ್ ನ್ನು ಹೊಂದಿಕೊಂಡು ಹೋಗಿರುತ್ತದೆ ಎಂದರೆ ಸಾಕ್ಷಿ ಹೌದು ಎಂದು ನುಡಿದಿದ್ದು, ಅದು ಖರಾಬಿನಲ್ಲಿದ್ದು ಕಾಲುದಾರಿ ಆಗಿರುತ್ತದೆ ಎಂದು ನುಡಿದಿರುತ್ತಾರೆ. ನನ್ನ ಜಮೀನಿನಿಂದ ನರಿಮಡ್ಡಿ ಗುಡ್ಡದವರೆಗೂ ಕಾಲುದಾರಿ ಹಾದುಹೋಗಿರುತ್ತದೆ. ವಾದಿಯರು ನಿಮ್ಮ ಜಮೀನನ್ನು ಒತ್ತುವರಿ ಮಾಡಿರುತ್ತಾರೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದಿರಾ ಎಂದರೆ ಸರಿಯಲ್ಲ. ವಾದಿಯರ ದಾವ ಸ್ವತ್ತಿಗೆ ನನ್ನ ಯಾವುದೇ ತಂಟೆ ತಕರಾರು ಇರುವುದಿಲ್ಲ. ವಾದಿಯರು ನೀವು ಮಾಡಿಸಿರುವ ಹದ್ದುಬಸ್ತನ್ನು ಪ್ರಶ್ನಿಸಿ ಮಾನ್ಯ ಜಿಲ್ಲಾ ಭೂ ದಾಖಲೆಗಳ ನಿರ್ದೇಶಕರಿಗೆ ಮನವಿ ಸಲ್ಲಿಸಿರುತ್ತಾರೆಂದರೆ ಸಾಕ್ಷಿ ಇರಬಹುದು ಎಂದು ನುಡಿದಿರುತ್ತಾರೆ. ಸದರಿ ವಿಚಾರದ ಬಗ್ಗೆ ನಿಮಗೆ ಮಾಹಿತಿ ಇದೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ. ವಾದಿಯರು ನಿಮ್ಮ ಜಮೀನನ್ನು ಒತ್ತುವರಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಯರಿಗೆ ತೊಂದರೆ ಕೊಡವ ಉದ್ದೇಶದಿಂದ ಸರ್ವೆಯರ್ ರವರೊಂದಿಗೆ ಶರೀಕಾಗಿ ಸುಳ್ಳು ನಕ್ಷೆಯನ್ನು ತಯಾರಿಸಿರುತ್ತಿರಾ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

ಓ. ಕೇ. ಸ. ಇ. ಎ. ಒ.

ಸಹಿ/-

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು

**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**